**Class: Shastri-III  Sem: V  Paper: III  Sub: Kannada  Paper code: 1213**

## Text Book: ಕನ್ನಡ ಸಾಹಿತ್ಯ ಚರಿತ್ರೆ

ವಿಸ್ತಾರ ವೈವಿಧ್ಯತೆಗಳಿಂದ ಕೂಡಿದ ಭರತಖಂಡದಲ್ಲಿ ನೂರಾರು ಭಾಷೆಗಳು ಬಳಕೆಯಲ್ಲಿವೆ. ಅವುಗಳಲ್ಲಿ ಒಂದಷ್ಟು ಭಾಷೆಗಳನ್ನು ಮಾತ್ರವೇ ಅಧಿಕೃತ ಭಾಷೆಗಳೆಂದು ಸ್ವೀಕರಿಸಿದ್ದಾರೆ. ಅದರಲ್ಲಿ ಕೋಟ್ಯಂತರ ಕನ್ನಡಿಗರಾಡುವ ಕನ್ನಡ ಭಾಷೆಯೂ ಒಂದು. ಕನ್ನಡದ ಈ ಬಾಯ್ನುಡಿ ಸಾಹಿತ್ಯದ ಗದ್ದುಗೆಯನ್ನು ಏರಲು ತೆಗೆದುಕೊಂಡ ಸಮಯ, ಆ ಕಾಲಘಟ್ಟದಲ್ಲಿ ಭಾಷೆಯಲ್ಲಾದ ಅವಸ್ಥಾಂತರಗಳು ಎಲ್ಲವುಗಳ ಸವಿಸ್ತಾರ ವರ್ಣನೆಯಿದೆ. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಇದು ಉಪಯುಕ್ತವಾದ ಗ್ರಂಥ. ಸಾಹಿತ್ಯಕ್ಕೊಂದು ಚರಿತ್ರೆ ಇರುವಂತೆ ಕನ್ನಡಕ್ಕೊಂದು ಚರಿತ್ರೆ ಇದೆ.

- ❖ ಕನ್ನಡ ಸಾಹಿತ್ಯದ ಮಹತ್ವನ್ನು ತಿಳಿಸುವ ಸದುದ್ದೇಶದಿಂದ ಇದರ ಸ್ಥೂಲ ಪರಿಚಯ ಅಗತ್ಯ. ಈ ನಿಟ್ಟಿನಲ್ಲಿ ಇದು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ.
- ❖ ಸಾಹಿತ್ಯ ಚರಿತ್ರೆಯ ಸ್ವರೂಪ, ಉದ್ದೇಶ ಮತ್ತು ಪ್ರಯೋಜನ, ಅಧ್ಯಯನ ಕ್ರಮಗಳು, ಕನ್ನಡ ಸಾಹಿತ್ಯದ ಪ್ರಾಚೀನತೆ, ಧರ್ಮರಾಜಾಶ್ರಯ ಇವೆಲ್ಲವೂ ಒಂದು ರೀತಿಯಲ್ಲಿ ಮಾಹಿತಿ ಗ್ರಂಥಗಳಂತೆ ವಿದ್ಯಾರ್ಥಿಗಳ ಜ್ಞಾನಮಟ್ಟವನ್ನು ಬೆಳೆಸಿಕೊಳ್ಳಲು ಸಹಾಯಕವಾಗಿವೆ.
- ❖ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವುದಕ್ಕೆ ಪಟ್ಟ ಪರಿಶ್ರಮ ಆದಿಯಾಗಿ ಅದಕ್ಕೆ ಉಪಯೋಗಿಸಿಕೊಂಡ ಮೂಲಾಧಾರಗಳು ಆಕರ ಗ್ರಂಥಗಳ ಅವಶ್ಯಕತೆಗಳ ಬಗ್ಗೆ ತಿಳುವಳಿಕೆ ಆಗುತ್ತದೆ.
- ❖ ಹತ್ತು ಹನ್ನೆರಡನೇ ಶತಮಾನದಲ್ಲಿದ್ದ ಕವಿಗಳು ಮತ್ತು ಕೃತಿಗಳ ರಚನೆ, ಆ ಕಾಲಘಟ್ಟದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಸಂಘರ್ಷಗಳ ಇತಿಹಾಸದ ಪರಿಚಯವಾಗುತ್ತದೆ.

## Text Book: ಛಂದಸ್ಸು

ಛಂದಸ್ಸು ಪ್ರಾಚೀನಕಾಲದಿಂದಲೂ ಒಂದು ಅಧ್ಯಯನಯೋಗ್ಯವಾದ ಶಾಸ್ತ್ರವಾಗಿ ಬೆಳೆದು ಬಂದಿದೆ. ಛಂದಸ್ಸಿನ ಉಗಮವನ್ನು ನಾವು ವೇದ ಕಾಲದಲ್ಲಿಯೇ ಕಾಣುತ್ತೇವೆ. ಕಾವ್ಯವೊಂದರಲ್ಲಿ ಕವಿಯೊಬ್ಬ ಬಳಸಿರುವ ಲಯಗಳನ್ನು ಗುರುತಿಸಿ, ಅವು ಲಕ್ಷಣಕ್ಕೆ ಸರಿಯಾಗಿ ಇವೆಯೇ ಎಂದು ಹೇಳುವ ಶಾಸ್ತ್ರವೇ ಛಂದಸ್ಸು. ಪದ್ಯಲಯಗಳನ್ನು ಅಳತೆ ಮಾಡುವ ಮಾನದಂಡವೇ ಛಂದಸ್ಸು.

- ❖ ಛಂದಸ್ಸಿನ ಸಾಮಾನ್ಯ ಸ್ವರೂಪವನ್ನು ತಿಳಿದುಕೊಳ್ಳುವುದರ ಜೊತೆಗೆ ಛಂದಸ್ಸಿನ ಅಧ್ಯಯನದ ಅಗತ್ಯ ಏಕಿದೆ? ಅದರ ಉಗಮ, ನಿಷ್ಪತ್ತಿ, ಅಧ್ಯಯನದಿಂದಾಗುವ ಪ್ರಯೋಜನಗಳೇನು? ಕಾವ್ಯಬಂಧದ ಲಕ್ಷಣವೇನು? ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಹಕರಿಸುತ್ತದೆ.
- ❖ ಶ್ರೇಷ್ಠವಾದ ಸಾಹಿತ್ಯ ರಚನೆಯ ಹಿಂದಿರುವ ಸಂವಹನ ಸಾಮರ್ಥ್ಯದ ಪರಿಚಯವಾಗುತ್ತದೆ.
- ❖ ಪ್ರಾಸ, ಲಯ, ಗಣ ವಿಂಗಡಣೆ, ಯತಿ ವಿಚಾರ, ವರ್ಣ ವೃತ್ತಗಳು, ಖ್ಯಾತಕರ್ನಾಟಕ ವೃತ್ತಗಳು ಮಾರ್ಗೀ ಮತ್ತು ದೇಸೀ ಸಾಹಿತ್ಯ ಪ್ರಕಾರಗಳ ಸ್ವರೂಪ, ಹೊಸಗನ್ನಡ ಛಂದಸ್ಸಿನ ಬಳಕೆ ಇತ್ಯಾದಿಯಾಗಿ ಕಾವ್ಯಾಭ್ಯಾಸಕ್ಕೆ ಪೂರಕವಾದ ಅಂಶಗಳನ್ನು ಕಲಿಯಲು ಅನುಕೂಲವನ್ನು ಒದಗಿಸುತ್ತದೆ.

**Class: Shastri-III Sem:VI Paper: III Sub: Kannada Paper code: 2213**

## Text Book: ಶಬ್ದಮಣಿದರ್ಪಣ

ಇದುವರೆಗೂ ದೊರೆತಿರುವ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಕರ್ಣಾಟಕ ಶಬ್ದಶಾಸ್ತ್ರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥವೆಂದರೆ ಶಬ್ದಮಣಿದರ್ಪಣವೇ. ಕೇಶಿರಾಜನ ಶಬ್ದಮಣಿದರ್ಪಣ ಸಮಪ್ರಮಾಣದ ಹಳಗನ್ನಡ ವ್ಯಾಕರಣ ಗ್ರಂಥ. ಇಲ್ಲಿನ ಸೂತ್ರಗಳೆಲ್ಲವೂ ಕೇಶಿರಾಜ ವಿರಚಿತ ಕಂದ್ಯಪದ್ಯಗಳು. ಅವುಗಳ ವೃತ್ತಿಯನ್ನು ತಾನೇ ಬರೆದು, ಪೂರ್ವಕವಿ ಪ್ರಯೋಗಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾನೆ. ಆತನು ರಸಜ್ಞನೆಂಬುದಕ್ಕೆ ಆತನ ಈ ವ್ಯಾಕರಣ ಗ್ರಂಥವೇ ಸಾಕ್ಷಿ.

- ಪೀಠಿಕಾ ಪ್ರಕರಣ ಮತ್ತು ಸಂಧಿಪ್ರಕರಣದ ಅಧ್ಯಾಯ ಭಾಗಗಳು ಮಾತ್ರ ಈ ಸೆಮಿಸ್ಟರ್ ನಲ್ಲಿ ಇರುವುದರಿಂದ ಹಳೆಗನ್ನಡದ ಕೆಲವು ಪ್ರಯೋಗಗಳ ಪರಿಚಯ ಇದರಲ್ಲಿ ಆಗುತ್ತದೆ.
- ಭಾಷಾ ಅವಸ್ಥಾಂತರದ ಸಂದರ್ಭದಲ್ಲಿ ಕೇಶಿರಾಜನ ಕಾಲಕ್ಕಾಗಲೇ ಕನ್ನಡ ಭಾಷೆಯಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಗಮನಿಸಿ ಅದರ ಸ್ವರೂಪ ವಿಮರ್ಶೆಯನ್ನು ವಿಶ್ಲೇಷಣೆಯನ್ನು ಉದಾಹರಣೆ ಸಹಿತವಾಗಿ ತಿಳಿಸಿದ್ದಾನೆ.
- ಕನ್ನಡದ ವರ್ಣಮಾಲೆಯಲ್ಲಿ ಕ್ಷಳದ ಪ್ರತ್ಯೇಕತೆಯನ್ನು ಗುರುತಿಸಿ ಅದರ ಸ್ಥಾನವನ್ನು ವಿವೇಚಿಸಿ ಅರ್ಥವಿವರಣೆಯನ್ನು ವಿಶದಪಡಿದ್ದಾನೆ.
- ಕಾಲಕ್ರಮದಲ್ಲಿ ಘಟಿಸಿದ ಭಾಷಿಕ ವ್ಯತ್ಯಯಗಳನ್ನು ಸಾಹಿತ್ಯ ರಚನೆಯಲ್ಲಿ ತಲೆದೋರುತ್ತಿದ್ದ ಯಥಾತಥಾರೂಪಗಳ ಉಲ್ಲೇಖದೊಂದಿಗೆ ವಿಶ್ಲೇಷಣೆಯನ್ನು ಒದಗಿಸಿದ್ದಾನೆ.
- ಹಳಗನ್ನಡ ಭಾಷೆಯ ಸೌಷ್ಠವ, ಸೌಂದರ್ಯಗಳನ್ನು ಕಾಪಾಡುವ ಉದ್ದೇಶದಿಂದ ಈ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತಿರುವುದು ವಿದಿತವಾಗುತ್ತದೆ.

## Text Book: ಹರಿಶ್ಚಂದ್ರಕಾವ್ಯ

ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯ ನಡುಗನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯವಾದುದು. ಇದು ಷಟ್ಪದಿ ಪ್ರಕಾರದಲ್ಲಿ ರಚನೆಯಾದ ಕೃತಿ. ರಾಘವಾಂಕನನ್ನು ಷಟ್ಪದಿ ಬ್ರಹ್ಮನೆಂದು ಕರೆದರೂ ಆತನಿಗಿಂತಲೂ ಪೂರ್ವದಲ್ಲಿಯೇ ಷಟ್ಪದಿ ಹುಟ್ಟಿತ್ತು. ಷಟ್ಪದಿಯಲ್ಲಿಯೇ ಅಖಂಡ ಕಾವ್ಯಸೃಷ್ಟಿಗೆ ಕೈಯಿಟ್ಟವರಲ್ಲಿ ಈತನೇ ಮೊದಲಿಗ. ಅಷ್ಟೇ ಅಲ್ಲ, ಈತನು ಷಟ್ಪದಿಯಲ್ಲಿ ವೈವಿಧ್ಯತೆಯನ್ನು ತರಲು ಸಾಕಷ್ಟು ಪ್ರಯೋಗಗಳನ್ನು ನಡೆಸಿದ್ದಾನೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಹರಿಶ್ಚಂದ್ರ ಕಾವ್ಯದ ಪೂರ್ಣ ಪಠ್ಯ ಆತನ ಪರಿಚಯದೊಂದಿಗೆ ಆತನ ಕಾವ್ಯದ ಮಹತ್ವನ್ನು ಅರಿಯಲು ಸಹಾಯಕವಾಗಿದೆ.

- ಶ್ರೇಷ್ಠವಾದ ಕಾವ್ಯಗುಣದ ಪರಿಚಯವಾಗುತ್ತದೆ.
- ಕನ್ನಡ ಸಾಹಿತ್ಯಕ್ಕೆ ಪ್ರೇರಣೆ, ಪೋಷಣೆ, ಪ್ರಚೋದನೆಗಳು ದೊರೆತಿರುವುದರ ಹಿನ್ನಲೆ ತಿಳಿಯುತ್ತದೆ.
- ನಡುಗನ್ನಡದ ಕಾಲಘಟ್ಟದಲ್ಲಿ ವೀರಶೈವ ಪುರಾಣಗಳಿಂತ ವಿಭಿನ್ನವಾದ ಶೈಲಿ ನಿರೂಪಣೆ ಸ್ಪಷ್ಟಗೊಳ್ಳುತ್ತದೆ.
- ಸನ್ನಿವೇಶ ರಚನಾ ಕೌಶಲ ಮತ್ತು ಔಚಿತ್ಯ ಜ್ಞಾನದ ಕಾವ್ಯದ ಸಮಗ್ರ ಪರಿಚಯವಾಗಿದೆ.
- ಕಾವ್ಯನಾಯಕನ ಸತ್ಯಸಂಧತೆಗೆ ದೊರೆತ ಜಯ ಜೀವನ ಮಾರ್ಗವನ್ನು ರೂಪಿಸಿಕೊಳ್ಳುವಲ್ಲಿ ಸಹಾಯಕಾವಾಗಿದೆ.